ಸಾಕ್ಷಿಯನ್ನು ಇಂದು ದಿನಾಂಕ:14-02-2024 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ ಎಸ್ ಎ ಜಿ ವಕೀಲರಿಂದ

ಅಸಲು ದಾವಾ ನಂಬರ 138/2015 ರಲ್ಲಿರುವ ವಾದಿಯರು ನನ್ನ ಸಹೋದರಿಯವರು ಮತ್ತು ತಾಯಿ ಆಗಬೇಕು. ಸದರಿ ನನ್ನ ತಾಯಿ ಮತ್ತು ಸಹೋದರಿಯವರು ನನ್ನ ವಿರುದ್ದ ಮತ್ತು ನನ್ನ ಅಣ್ಣ ತಮ್ಮಂದಿರ ವಿರುದ್ದ ಪಾಲು ದಾವೆ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಲಯದ ಮುಂದೆ ದಾವೆ ಸಲ್ಲಿಸಿರುತ್ತಾರೆ ಎಂದರೆ ನಿಜ. ಆ ದಾವೆ ದಿನಾಂಕ 01-03-2019 ರಂದು ಡಿಕ್ರಿಯಾಗಿತ್ತು ಎಂದರೆ ಸರಿಯಲ್ಲ. ನಾನು ಆ ಅದೇಶ ವಿರುದ್ದ ವಿಜಯಪೂರ ಜಿಲ್ಲಾ ನ್ಯಾಯಾಲಯದಲ್ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಅಸಲು ದಾವಾ ನಂಬರ 138/2015 ಈಗಲು ಕೂಡಾ ಚಾಲ್ತಿಯಲ್ಲಿದೆ ಎಂದರೆ ನಿಜ. ಈಗ ಈ ದಾವೆಯಲ್ಲಿ ಇರತಕ್ಕಂತಹ ನನ್ನ ಪರ ವಕೀಲರೇ ಆ ದಾವೆಯಲ್ಲಿ ನನ್ನ ಪರ ದಾವೆ ನಡೆಸುತ್ತಿದ್ದಾರೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಎಸ್ ಜಿ ಕುಲಕರ್ಣಿ ವಕೀಲರ ಮೂಲಕ ನನ್ನ ಪರವಾಗಿ ದಾವೆಯನ್ನು ನಡೆಸುತ್ತಿದ್ದೇನೆ ಎಂದು ಹೇಳುತ್ತಾರೆ.

2. ಈ ದಾವೆಯಲ್ಲಿರತಕ್ಕಂತಹ ದಾವಾ ವಸ್ತು ಸರ್ವೆ ನಂಬರ 318/1 ಡ ಕೂಡಾ ಅಸಲು ದಾವಾ ನಂಬರ 138/2015 ರಲ್ಲಿ ದಾವಾ ವ್ಯಾಜ್ಯ ವಸ್ತುವಾಗಿದೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಈ ದಾವೆಯ ಪ್ರತಿವಾದಿ 1 ರಿಂದ 3 ಇವರನ್ನು ಪಕ್ಷಗಾರರನ್ನಾಗಿ ತೋರಿಸಿಲ್ಲ ಎಂದರೆ ನಿಜ. ಸರ್ವೆ ನಂಬರ 318 ಇದು ಒಟ್ಟು 27 ಎಕರೆ 19 ಗುಂಟೆ ಜಮೀನು ಇದ್ದು. ಇದರ ಮೂಲ ಮಾಲಿಕ ನನ್ನ ತಂದೆ ಭೀಮಶ್ಯಾ ಬಸಲಿಂಗಪ್ಪ ಶಿವಪೂರ ಅಂತಾ ಇದ್ದರು. ಸದರಿ ಮೂಲ ಆಸ್ತಿ 33 ಎಕರೆಕ್ಕಿಂತ ಹೆಚ್ಚಿಗೆ ಇತ್ತು ಎಂದರೆ ಸರಿಯಲ್ಲ. ಸರ್ವೆ ನಂಬರ 318 ರಲ್ಲಿ 1952 ಪೋಡಿ ಹಿಸ್ಸಾ ಆಗಿ 3 ಪಟ್ಟಿಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಡ ನಂಬರ 46 ಮಂಜೂರಾಗಿದೆ ಎಂದರೆ ನಿಜ.

3. ಸದರಿ ಪೋಡಿ ಆದ ಪ್ರಕಾರ ಸರ್ವೆ ನಂಬರ 318/1 ಕ್ಷೇತ್ರ 5 ಎಕರೆ 36 ಗುಂಟೆ, ಸರ್ವೆ ನಂಬರ 318/2 ಕ್ಷೇತ್ರ 5 ಎಕರೆ 37 ಗುಂಟೆ ಮತ್ತು ಸರ್ವೆ ನಂಬರ

318/3 ಕ್ಷೇತ್ರ 23 ಎಕರೆ 17 ಗುಂಟೆ ಆಗೆ ಎಂದರೆ ನಿಜ. 1952 ರಲ್ಲಿ ಸರ್ವೇ ನಂಬರ 318/2 ರ ಕ್ಷೇತ್ರ 5 ಎಕರೆ 37 ಗುಂಟೆ ಜಮೀನಿನ ಮಾಲಿಕರು ನಿಂಗಪ್ಪ ಸೇತಸನರಿ ಅಂತಾ ಇದ್ದರು ಎಂದರೆ ನಿಜ. ಸರ್ವೇ ನಂಬರ 318/2 ರ ಕ್ಷೇತ್ರ 5 ಎಕರೆ 37 ಗುಂಟೆ ಜಮೀನನ್ನು 1954 ರಲ್ಲಿ ಅರ್ಧ ಹಿಸ್ಸೆ ಶಂಕ್ರೆಪ್ಪ ತಳವಾರ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನಿಜ. ಡೈರಿ ನಂಬರ 272 ಮಂಜೂರಾಗಿದೆ ಎಂದರೆ ನಿಜ. ಸದರಿ ಶಂಕ್ರೆಪ್ಪ ತಳವಾರ ಆ ಆಸ್ತಿಯನ್ನು ಶರಣಪ್ಪ ಕಲ್ಲಪ್ಪ ಬ್ಯಾಡಗಿಹಾಳ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನಿಜ. 1955 ರಂದು ಡೈರಿ ನಂಬರ 723 ಅಂತಾ ಮಂಜೂರಾಗಿದೆ ಎಂದರೆ ನಿಜ. ಶರಣಪ್ಪ ಕಲ್ಲಪ್ಪ ಬ್ಯಾಡಗಿಹಾಳ ಇವರು ಅರ್ಧ ಹಿಸ್ಸೆ ಜಮೀನನ್ನು ಭೀಮಶ್ಯಾ ಬಸಲಿಂಗಪ್ಪ ಶಿವಪೂರ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನಿಜ. ಅದು ಡೈರಿ ನಂಬರ 2315 ದಾಖಲಾಗಿದೆ ಎಂದರೆ ನಿಜ.

4. ನನ್ನ ತಂದೆ ಖರೀದಿ ಮಾಡಿದ ಆಸ್ತಿಯನ್ನು ಮಾರಾಟ ಮಾಡಿದ ಬ್ಯಾಡಗಿಹಾಳರವರು ಸ್ವಾಧಿನದಲ್ಲಿದ್ದು ಕಬ್ಜಾವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ತಂದೆ ಯಾರ ಜೊತೆ ವ್ಯವಹಾರ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ಮುಂದುಡಲಾಯಿತು.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ